ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು)

ಅ) ಹೌದು.

ಆ) 2014–15ನೇ ಸಾಲಿನ ಆರ್.ಐ.ಡಿ.ಎಫ್ XX ಯೋಜನೆಯ ಅಡಿಯಲ್ಲಿ ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನ ಹಂಸಭಾವಿ ಪಶು ಚಿಕಿತ್ಸಾಲಯ ಕಟ್ಟಡ ನಿರ್ಮಾಣಕ್ಕಾಗಿ ₹. 27.25 ಲಕ್ಷಗಳ ಅನುದಾನಕ್ಕೆ ಮಂಜೂರಾತಿ ದೊರೆತಿದೆ.

ಅನುದಾನ ಲಭ್ಯತೆಗೆ ಅನುಗುಣವಾಗಿ ಹಂತ ಹಂತವಾಗಿ ಕಟ್ಟಡ ನಿರ್ಮಾಣಕ್ಕೆ ಕ್ರಮವಹಿಸಲಾಗುವುದು.

ಇ) ಆರ್.ಐ.ಡಿ.ಎಫ್ XX ಯೋಜನೆ ಅಡಿಯಲ್ಲಿ ರಾಜ್ಯದಲ್ಲಿ ಕಟ್ಟಡ ಹೊಂದಿಲ್ಲದೇ ಇರುವ 189 ಪಶುವೈದ್ಯಕೀಯ ಸಂಸ್ಥೆಗಳಿಗೆ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರಾತಿ ನೀಡಲಾಗಿದ್ದು ಅನುದಾನ ಲಭ್ಯತೆ ಅನುಸಾರ ಹಂತ ಹಂತವಾಗಿ ಕಟ್ಟಡ ನಿರ್ಮಾಣ ಕಾರ್ಯಕ್ರಮ ಹಮ್ಮಿಕೊಳ್ಳಲು ಕ್ರಮ ವಹಿಸಲಾಗುವುದು.

ಪಶು ಚಿಕಿತ್ಸಾಲಯಗಳಿಗೆ ಕಡಿಮೆ ಪ್ರಮಾಣದಲ್ಲಿ ಔಷಧಿಗಳ ಪೂರೈಕೆ

20 (171); ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು)

ಅ) ಈಗ ಸದ್ಯ ಪಶುಚಿಕಿತ್ಸಾಲಯಗಳಿಗೆ, ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ, ಪಶು ಆಸ್ಪತ್ರೆಗಳಿಗೆ ಪೂರೈಕೆ ಆಗುತ್ತಿರುವ ಔಷಧದ ಮೊತ್ತ ಎಷ್ಟು?

ಆ) ಪ್ರಸ್ತುತ ಪೂರೈಕೆ ಆಗುತ್ತಿರುವ ಔಷಧ ಕಡಿಮೆ ಆಗಿರುವುದರಿಂದ, ಜಾನುವಾರುಗಳಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಪೂರೈಕೆ ಆಗುತ್ತಿರುವ ಔಷಧವನ್ನು ಹೆಚ್ಚಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು)

ಅ) 2014–15 ನೇ ಸಾಲಿಗೆ ಪಶು ಆಸ್ಪತ್ರೆಗಳಿಗೆ, ಪಶು ಚಿಕಿತ್ಸಾಲಯಗಳಿಗೆ ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಿಗೆ ಔಷಧ ಮತ್ತು ರಾಸಾಯನಿಕ ಹಾಗೂ ಆಸ್ಪತ್ರೆ ಪರಿಕರಗಳನ್ನು ಪೂರೈಸಲು ಒಟ್ಟು ₹. 3225.16 ಲಕ್ಷ ಅನುದಾನ ನಿಗದಿಯಾಗಿದೆ.

ಆ) ಲಭ್ಯವಿರುವ ಅನುದಾನದಲ್ಲಿ ಅಗತ್ಯತೆಗನುಸಾರ ಔಷಧಿ ವಿತರಿಸಲಾಗುತ್ತಿದೆ.

ಇ) ಕ್ರಮ ಕೈಗೊಳ್ಳಲಾಗುತ್ತಿದೆ.

ಕಾನೂನು ನೆರವು ಬಗ್ಗೆ

21 (173); ಶ್ರೀ ಬಣಕಾರ್ ಯು.ಬಿ (ಹಿರೇಕೆರೂರು)

ಅ) ರಾಜ್ಯದ ವಿವಿಧ ಕೋರ್ಟ್‌ಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರು ಮಕ್ಕಳು, ಮಹಿಳೆಯರು, ಒಂದು ಲಕ್ಷಕ್ಕಿಂತ ಕಡಿಮೆ ಆದಾಯವುಳ್ಳವರು ಎಷ್ಟು ಜನರು, ವಾದಿ ಅಥವ ಪ್ರತಿವಾದಿ ಅರ್ಜಿದಾರ ಅಥವಾ ಎದುರುಗಾರರು 31/3/2014ಕ್ಕೆ ಇದ್ದಾರೆ.

ಆ) ಉಚಿತ ಕಾನೂನು ನೆರವು ಪಡೆಯಲು ಕೋರ್ಟ್‌ಗಳಿಗೆ ಹೋಗಿ ದಾವೆ ಮಾಡಲು ಅಥವಾ ದಾವೆಗಳಲ್ಲಿ ಪ್ರತಿವಾದಿ ಅಥವಾ ಎದುರುಗಾರರು ಅವರಿಗೆ ಮಾರ್ಗದರ್ಶನವಿಲ್ಲದೆ ನೇರವಾಗಿ ಖಾಸಗಿ ವಕೀಲರನ್ನು ನೇಮಕ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಕಾನೂನು ನೆರವು ಅರ್ಹರಿಗೆ ದೊರೆಯಲು ಸರ್ಕಾರ ಯಾವ ಪರಿಣಾಮಕಾರಿ ಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು)

ಅ) ದಿನಾಂಕ 01/01/2015ರಂತೆ